# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1729** |
| ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಸಲಾಗುತ್ತಿದೆ.<br>ರಾಜ್ಯದಲ್ಲಿ ಉತ್ಪಾದನೆ ಘಟಕಗಳಿಂದ ಉತ್ಪಾದನೆಯಾಗುವ ನಿಗದಿತ ಶಕ್ತಿಯು ಕಡಿಮೆಯಾದಲ್ಲಿ ಬ್ಯಾಂಕಿಂಗ್ ಸಿಸ್ಟಮ್ ನಲ್ಲಿ / ಮುಕ್ತ ಮಾರುಕಟ್ಟೆಯಲ್ಲಿ ವಿದ್ಯುತ್‌ನ್ನು ಪಡೆದು ಬೇಡಿಕೆಯನ್ನು ಪೂರೈಸಲಾಗುತ್ತಿದೆ. |
| ಆ) | ಬೇಸಿಗೆ ಅವಧಿಯಲ್ಲಿ ಪ್ರತಿ ನಿತ್ಯ ಅಗತ್ಯವಿರುವ ವಿದ್ಯುತ್ ಪ್ರಮಾಣ ಎಷ್ಟು; ಅಗತ್ಯ ವಿದ್ಯುತ್ ಲಭ್ಯವಿದೆಯೇ, ವಿದ್ಯುತ್ ಬೇಡಿಕೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ಒದಗಿಸುವುದು); | ಬೇಸಿಗೆ ಅವಧಿಯಲ್ಲಿ (ಮಾರ್ಚ್-2026 ರಿಂದ ಮೇ-2026) ಅಂದಾಜಿಸಲಾದ ಬೇಡಿಕೆಯ ಪ್ರಮಾಣ 27631 ಮಿ.ಯೂ ಇದ್ದು, ಸದರಿ ಬೇಡಿಕೆಯ ದಿನವಹಿ ಸರಾಸರಿ ಪರಿಮಾಣವು 300.34 ಮಿ.ಯೂ ಗಳಾಗಿರುತ್ತದೆ.<br>ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯನ್ನು ನೀಗಿಸಲು ಎಸ್ಕಾಂಗಳ ಪರವಾಗಿ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿ.ಸಿ.ಕೆ.ಎಲ್) ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>**1. <u>ಬ್ಯಾಂಕಿಂಗ್ ವ್ಯವಸ್ಥೆಗಳು</u> :**<br>**a) <u>ಉತ್ತರ ಪ್ರದೇಶ (UPPCL):</u>**<br>➢ ಈಗಾಗಲೇ ಹಿಂದಿನ ಮಳೆಗಾಲದಲ್ಲಿ ಲಭ್ಯವಿದ್ದ, ಹೆಚ್ಚುವರಿ ವಿದ್ಯುತ್ತನ್ನು<br>ದಿನಾಂಕ 03.10.2025 ರಿಂದ 18.10.2025 ವರೆಗೆ ಸುಮಾರು 100-300 ಮೆ.ವ್ಯಾ. (17.6 ಎಂ.ಯೂ, 19:00 to 24:00 Hrs) ನೀಡಿದ್ದು, ದಿನಾಂಕ 01.03.2026 ರಿಂದ 31.03.2026 ವರೆಗೆ 118.09 ಮೆ.ವ್ಯಾ. ವಿದ್ಯುತ್ 5 ಗಂಟೆಗಳ ಕಾಲ (@104%, 18.30 MU, 19:00 to 24:00 Hrs) ಪಡೆಯಲಾಗುತ್ತಿದೆ.<br>➢ 100 ರಿಂದ 1300 ಮೆ.ವ್ಯಾ ರಷ್ಟು (morning & evening peak hours) ವಿದ್ಯುತ್ತನ್ನು ದಿನಾಂಕ 03.11.2025 ರಿಂದ 15.05.2026 ರವರೆಗೆ ವಿದ್ಯುತ್ ಪಡೆಯಲಾಗುತ್ತಿದೆ.<br>**b) <u>ಪಂಜಾಬ್ (PSPCL):</u>**<br>➢ ಈಗಾಗಲೇ ಹಿಂದಿನ ಮಳೆಗಾಲದಲ್ಲಿ ಲಭ್ಯವಿದ್ದ ಹೆಚ್ಚುವರಿ ವಿದ್ಯುತ್ತನ್ನು<br>ದಿನಾಂಕ 14.06.2025 ರಿಂದ 30.09.2025 ವರೆಗೆ ಸುಮಾರು 200-450 ಮೆ.ವ್ಯಾ. (856.64 ಎಂ.ಯೂ, RTC) ನೀಡಿದ್ದು,<br>ದಿನಾಂಕ 01.11.2025 ರಿಂದ 15.04.2026 ವರೆಗೆ 50 ರಂದ 445 ಮೆ.ವ್ಯಾ. (@105%, 899.47 MU, RTC) ಪಡೆಯಲಾಗುತ್ತಿದೆ.<br>➢ 100 ರಿಂದ 300 ಮೆ.ವ್ಯಾ (RTC) ರಷ್ಟು ವಿದ್ಯುತ್ತನ್ನು ದಿನಾಂಕ 01.01.2026 ರಿಂದ 10.04.2026 ರವರೆಗೆ ಪಡೆಯಲಾಗುತ್ತಿದೆ.<br>**c) <u>ಹರಿಯಾಣ (HPPC):</u>**<br>➢ ರಾಜ್ಯವು 01.01.2026 ರಿಂದ 15.04.2026 ರವರೆಗಿನ ಅವಧಿಗೆ 100 MW ರಿಂದ 400 MW (RTC) ವರೆಗೆ HPPC ಯೊಂದಿಗೆ ಬ್ಯಾಂಕಿಂಗ್ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. |

| | | |
|---|---|---|
| | | **2. <u>ವಿದ್ಯುತ್ ಮಾರುಕಟ್ಟೆ ಬಳಕೆ:</u>**<br>➢ 24.12.2025 ರಿಂದ 31.03.2026 ಮತ್ತು 16.04.2026 ರಿಂದ 30.04.2026 ರವರೆಗೆ 300 ರಿಂದ 700 MW RTC ವರೆಗಿನ ವಿದ್ಯುತ್ತನ್ನು ಮುಂಜಾಗ್ರತಕ್ರಮವಾಗಿ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಖರೀದಿಸಲಾಗಿದೆ.<br>➢ ಯಾವುದೇ ಅನಿರೀಕ್ಷಿತ ಉತ್ಪಾದನಾ ನಿಲುಗಡೆಗಳು ಅಥವಾ ಬೇಡಿಕೆಯಲ್ಲಿ ಅನಿರೀಕ್ಷಿತ ಏರಿಕೆಗಳನ್ನು ನಿರ್ವಹಿಸಲು ವಿದ್ಯುತ್ ವಿನಿಮಯ ಕೇಂದ್ರದಿಂದ ಅವಶ್ಯಕತೆಗನುಗುಣವಾಗಿ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ.<br>**3. <u>ಶಕ್ತಿ ಯೋಜನೆ:</u>**<br>ಶಕ್ತಿಯೋಜನೆ ಅಡಿಯಲ್ಲಿ ಖರೀದಿಸಿಲಾದ 1000 MW RTC ವಿದ್ಯುತ್ತನ್ನು, ದಿನಾಂಕ 01.04.2026 ರಿಂದ ಪಡೆಯಲಾಗುವುದು. |
| ಇ) | ಅನ್ಯ ರಾಜ್ಯಗಳಿಂದ ವಿದ್ಯುತ್ ಖರೀದಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:<br>ಹಾಗಿದ್ದರೇ, ಯಾವ ಯಾವ ರಾಜ್ಯಗಳಿಂದ ಎಷ್ಟು ಮೆಗಾವ್ಯಾಟ್ ವಿದ್ಯುತ್ ಖರೀದಿಗೆ ಸರ್ಕಾರ ಮುಂದಾಗಿದೆ: | ಪ್ರಸ್ತುತ ಅನ್ಯ ರಾಜ್ಯಗಳಿಂದ ನೇರವಾಗಿ ವಿದ್ಯುತ್ತನ್ನು ಖರೀದಿ ಮಾಡುತ್ತಿರುವುದಿಲ್ಲ. |
| ಈ) | ಎಷ್ಟು ರಾಜ್ಯಗಳೊಂದಿಗೆ ಯಾವ ದರಕ್ಕೆ ವಿದ್ಯುತ್ ಖರೀದಿಗೆ ಸರ್ಕಾರ ಒಡಂಬಡಿಕೆ ಮಾಡಿಕೊಂಡಿದೆ? (ವಿವರ ಒದಗಿಸುವುದು); | |

ಸಂಖ್ಯೆ: ಎನರ್ಜಿ 99 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು